Regd No B G 165 3-2-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂವತ್ಸರ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಜಪಾನಿನಲ್ಲಿ ಭೀಕರ ತುಫಾನ್ = ಸಾವು, ನೋವು

ಯಶಸ್ವಿ ಹರತಾಳ

ಜಮ್ಮು— ರಾಜ್ಯ ಸರಕಾರದ ಆಹಾರ ನೀತಿಯನ್ನು ಪ್ರತಿಭಟಿಸಿ ಜನಸಂಘ ಕರೆದಿದ್ದ ಹರತಾಳವು ಪೂರ್ಣ ಯಶಸ್ವಿಯಾಗಿ ನಡೆಯಿತು.

○

ಪ್ರಾಣಿಗಳ ಮೆರವಣಿಗೆ

ನ್ಯೂಯಾರ್ಕ್— ಒಂದು ಕಪಿ, ಒಂದು ಕತ್ತೆ, ಒಂದು ಕಪ್ಪು ಕುದುರೆ, ಒಂದು ಲೀಮಾ, 2 ಕುರಿಗಳು, 2 ಆಡುಗಳಿಗೆ ಧೂಳು ಮುಖವಾಡ ಹಾಕಿ ನೂಯಾರ್ಕು ಸಿಟಿ ಹಾಲ್ ಮುಂಬೆ, ವಾಯು ಕೆಡುತ್ತಿರುವ ಸಮಸ್ಯೆ ಪ್ರದರ್ಶಿಸಲು ಮೆರವಣಿಗೆ ಮಾಡಲಾಯಿತು

○

ಲಾಠಿ ಚಾರ್ಜು

ಬೆಂಗಳೂರು— ತಮಿಳುನಾಡು ಸರಕಾರವು ಶ್ರೀ ವಾಟಾಲ ನಾಗರಾಜರನ್ನು ಬಿಡುಗಡೆ ಮಾಡಿದ ವಿಷಯ ಇಲ್ಲಿಗೆ ಗೊತ್ತಾಗುವದಕ್ಕೆ ಮುಂಚೆ ನಿನ್ನೆ ನಡೆಸಿದ ಪ್ರದರ್ಶನ ಸ್ವಲ್ಪ ಹಿಂಸಾರೂಪ ತಾಳಿತ್ತು — ವೇಜಿಟ್ಟಿಕ್ ಸಿನಿಮಾ ಹತ್ತಿರ ಸೇರಿದ್ದ ಸಾವಿರ ಮಂದಿಯ ಗುಂಪಿನ ಮೇಲೆ ಲಾಠಿ ಛಾರ್ಜು ನಡೆಯಿತು.

ರೂ 1579290

ಬೊಂಬಾಯಿ— ಶನಿವಾರ ಕುಸಿಂಡೆ ಜೂಜಿನ ಜಾಕ್‌ಪಾಟ್ ಹಣ ವಿಶೇಷಗದೆ ರೂ 1579290 ಮುಂದುವರಿಸಲಾಗಿದೆ.

○

ಮನುಷ್ಯರ ಕೂದಲು

ಕೊಲಂಬೊ— ಬ್ರೆಜಿಲ್, ಇಟಲಿ, ಪಾಕಿಸ್ತಾನಗಳಿಂದ ಮಾನವ ಕೂದಲು ಕೇಳಿಕೆ ಆಕರ್ಷಣೀಯವಾಗಿದ್ದು, ಈಬಗ್ಗೆ ಸಿಲೋನಿನ ಅಸಂಸ್ಕದಾಯಕ ರಫ್ತು ಯೋಜಿಸಲಾಗುತ್ತಿದೆ

○

ತಪ್ಪು ಮಾಡುವ ಸಹಕಾರ ಸಂಘಗಳು

ಬೆಂಗಳೂರು — ತಪ್ಪು ಮಾಡುವ ಸಂಘಗಳ ಮೇಲೆ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂಬ ಖಾಸಗಿ ನಿರ್ಣಯ ವಿಧಾನ ಪರಿಷತ್ತಿನಲ್ಲಿ ಸ್ವಲ್ಪ ಚರ್ಚೆಯಾಯಿತು

★

ಘರ್ಷಣೆ

ಮಡಕೇರಿ— ಒಂದು ಹೋಟಲಿನಲ್ಲಿ ವಿದ್ಯಾರ್ಥಿಗಳ ಗುಂಪಿಗೂ ಹೋಟಲು ಕೆಲಸಗಾರರಿಗೂ ಆದ ಘರ್ಷಣೆಯಾ 10 ಮುಂದಿ ಗಾಯಗೊಂಡರು.

ಹರಿಯಾಣಾದಲ್ಲಿ

ಚಂಡೀಘರ್— ಒಂದು ದಿನ ಶಾಂತವಾಗಿದ್ದ ಹರಿಯಾಣಾದಲ್ಲಿ ನಿನ್ನೆ ಪುನಃ ನಿರೋಧ ಪ್ರದರ್ಶ ನಡೆದು, ಹಿಂಸಾಕಾರ್ಯಗಳೂ ನಡೆದವು – ರೈಲ್ವೇ ಮತ್ತು ಸರಕಾರಿ ಆಸ್ತಿಗಳ ಮೇಲೆ ಧಾಳಿ, ರೈಲು ಓಡರ ಟಕ್ಕೆ ಅಡ್ಡಿ, ಬಸ್ಸು ಸುಡುವುದು, ನಡೆದವು – ಅನೇಕ ಅಂಗಡಿಗಳನ್ನು ತೆರೆದಿರಲಿಲ್ಲ.

★

ಶ್ರೀ ವಾಟಾಲ್ ನಾಗರಾಜ್

ಮೈಸೂರು— ತಮಿಳುನಾಡು ಸರಕಾರದಿಂದ ಬಿಡುಗಡೆ ಮಾಡಲ್ಪಟ್ಟ ಶ್ರೀ ವಾಟಾಲ್ ನಾಗರಾಜ್ ಮತ್ತಿತರರು ನಿನ್ನೆ ರಾತ್ರಿ ಚಾಮರಾಜನಗರದಿಂದ ಆಗಮಿಸಿದರು.

★

ಭೂಮಿ ಹಂಚಿಕೆ

ಬೆಂಗಳೂರು— ಹೆಚ್ಚಾಗಿರುವ ವ್ಯವಸಾಯಕ್ಕೆ ಯೋಗ್ಯವಾದ ಎಲ್ಲ 12 ಲಕ್ಷ ಭೂಮಿಯನ್ನೂ ಭೂಮಿಯಿಲ್ಲದ ರೈತರುಗಳಿಗೆ ಎರಡು ವರ್ಷಗಳಲ್ಲಿ ಹಂಚಲಾಗುವದೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

●

ರೂ. 20 ಲಕ್ಷ ಜಾಮೀನು

ಬೊಂಬಾಯಿ— ರೂ. 100 ಕೋಟಿ ವಿಶೇಷ ಆಕ್ರಮ ಸಾಗಾಣಿಕೆ ಪದಾರ್ಥಗಳು ವಿನಿಮಯ ಸಂಬಂಧ ಅಪರಾಧಕ್ಕೆ ಗುರಿಯಾಗಿರುವ ನೇಮಿಲಾಲ್‌ರನ್ನು ರೂ 20 ಲಕ್ಷ ಜಾಮೀನಿನ ಮೇಲೆ ಬಿಡಲು ಆಜ್ಞೆ ಮಾಡಲಾಗಿದೆ.

★

ಶಾಂತಿ ಮೆರವಣಿಗೆ

ತಿರುಪತಿ — ಸರ್ವೋದಯ ದಿನದಂದು ಶಾಂತಿ ಮೆರವಣಿಗೆ ನಡೆಸಲಾಯಿತು.

ತುಫಾನ್ ಹಾವಳಿ

ಟೋಕಿಯೋ— ಪೂರ್ವ ಮತ್ತು ಉತ್ತರ ಜಪಾನಿನಲ್ಲಿ ವಾರಾಂತ್ಯದಲ್ಲಿ ಆದ ಸನುದಿಂದ ಬೀಸಿದ ಭೀಕರ ಗಾಳಿಯಿಂದ 14 ಮಂದಿ ಸತ್ತು, 37 ಮುಂದಿ ಗಾಯಗೊಂಡು, 11 ಮುಂದಿ ನಾಪತ್ತೆಯಾಗಿ, 4000 ಮನೆಗಳು ತೊಂದರೆಗೊಂಡಿವೆ.

○

ತಾ || 13 ಹರತಾಳವೆ !

ಬೆಳಗಾಂ— ತಾ|| 13 ರಂದು ಹಳೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ರಾಜಕೀಯ ಸಮ್ಮೇಳನ ಉದ್ಘಾಟಿಸಲು ಬಂದಾಗ ಹರತಾಳ ಆಚರಿಸಬೇಕೆಂದು ಹೊಸ ಕಾಂಗ್ರೆಸ್ಸಿನ ಬೆಳಗಾಂ ನಗರ ಕಾಂಗ್ರೆಸ್ ಸಮಿತಿ ನಿರ್ಣಯಿಸಿದೆ.

●

ಒಂದು ದಿನದ ಉಪವಾಸ

ಬೋಬಾಯಿ— ಪೇರುಗಳ ಮುಂದುವರಿದ ನೂರಾರು ಮೇಲೆ ಪ್ರತಿಬಂಧಕ ತೆಗೆಯದಿರುವದನ್ನು ಪ್ರತಿಭಟಿಸಿ ಸ್ಟಾಕ್ ಎಕ್ಸ್‌ಚೇಂಜಿನವರು ನಿನ್ನೆ ಸಾಂಕೇತಿಕ ಅನ್ನ ಸತ್ಯಾಗ್ರಹ ನಡೆಸಿದ್ದರಿಂದ ವಹಿವಾಟುಗಳೇನೂ ನಡೆಯಲಿಲ್ಲ.

★

ಕಲ್ಲು ಜೋಡು ಎಸೆತ

ಕಡಲೂರಿನಲ್ಲಿ ಹೊಸ ಕಾಂಗ್ರೆಸ್ ಆಶ್ರಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಒಂದು ಗುಂಪಿನವರು ಕಲ್ಲು ಮತ್ತು ಜೋಡು ಎಸೆದರು – 20 ಮಂದಿ ಗಾಯಗೊಂಡರು.

○

ಆಹಾರಧಾನ್ಯ ರಫ್ತು

ನವದೆಹಲಿ— ಇತರ ದೇಶಗರತ ಬೆಳೆಯದ ಆಹಾರಧಾನ್ಯಗಳನ್ನು ಭಾರತವು ಕ್ಷಿಪ್ರದಲ್ಲೇ ರಫ್ತು ಮಾಡಬಹುದೆಂದು ಆಹಾರ ಮಂತ್ರಿ ಶ್ರೀ ಜಗಜೀವನರಾಂ ಹೇಳಿದರು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ವ್ಯಾಪಾರಿಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು.

ಬಾಹುಸಾರ್ ಕಂಪೆನಿ, ನೂರಡಿ ರಸ್ತೆ. ಮೈಸೂರು-4.

ನ್ಯಾಯವಾದ ನಿರ್ಣಯ

ಚಂಡಿಗಢದ ಬಗ್ಗೆ ಕೇಂದ್ರ ಸರಕಾರದ ನಿರ್ಣಯ ನ್ಯಾಯವಾಗಿದೆ ಎಂದು ಪ್ರ ಧಾನಿ ಇಂದಿರಾರವರು ಹೇಳಿದರು.

ಮರಣದಂಡನೆ

ಕೋಲಾರ— ಅತ್ತೆಯನ್ನು ಕೊಂಡ ಸಿಪುರದ ಕೃಷ್ಣಪ್ಪನಿಗೆ ಮರಣದಂಡನೆ ವಿಧಿಸಲಾಯಿತು.

ಉಪಚುನಾವಣೆ

ನವದೆಹಲಿ— ತಾ|| 22 ರಂದು ಪಶ್ಚಿಮ ಬಂಗಾಳಾ ಶಾಸನಸಭಾ ಉಪ ಚು ನಾವಣೆಯಲ್ಲಿ ಎದುರಬದುರಾಗಿ ಹಳೇ ಮತ್ತು ಹೊಸ ಕಾಂಗ್ರೆಸ್ ಪರ ಉಮೇದು ವಾರರು ನಿಂತಿದ್ದಾರೆ – ಕಾಂಗ್ರೆಸ್ ಚುನಾವಣಾ ಗುರುತು ಚುನಾವಣಾ ಕಮಿಷ್ಣ ನರ್ಯಾಲೋಚನೆಯಲ್ಲಿರುವದರಿಂದ ಇವರಿಗೆ ಬೇರೆ ಗುರುತುಗಳು ಕೊಡಲಾಗಿದೆ.

ಪ್ರಶಸ್ತಿ ವಾಪಸ್ಸಾಗಬೇಕು

ಕಲ್ಕತ್ತಾ— ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರನ್ನು ಅತ್ಯಂತ ಗೇಲಿ ಮಾ ಡುವ ರೀತಿಯಲ್ಲಿ ನುಡಿದಿರುವ ಚಲಚಿತ್ರ ನಿರ್ದೇಶಕ ಶ್ರೀ ಹಿಟ್ವಿಕ್ ಘಟಕ್ ರಿಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟಿರುವದನ್ನು ಪ್ರತಿಭಟಿಸಿ, ಅದನ್ನು ವಾಪಸ್ಸು ತೆಗೆದುಕೊಳ್ಳ ಬೇಕೆಂದು ಪಶ್ಚಿಮ ಬಂಗಾಳಾ ಹಳೇ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ರಾಷ್ಟ್ರಾಧ್ಯಕ್ಷ ಗಿರಿಯವರಿಗೆ ತಿಳಿಸಿರುವರು.

ಭ್ರಷ್ಟಾಚಾರ ವಿರುದ್ಧ

ನವದೆಹಲಿ— ಕೇಂದ್ರ ತನಿಖಾ ಶಾಖೆ ಸಿದ್ಧಪಡಿಸಿದ ವರದಿಯ ಮೇಲೆ ರಾಜ್ಯ ವಿನೂ ಕಾರ್ಪೊರೇರ್ಷ ಮಾಜಿ ಮ್ಯಾನೇಜರ್, ಮದ್ರಾಸಿನ ಪ್ರಾದೇಶಿಕ ನೆಯ್ಗೆ ಕಮಿ ಷನರ್ ಕಚೇರಿಯ ತಾಂತ್ರಿಕ ತನಿಖೆಗಾರ, ಹಾಗೂ ದುರ್ಗಾಪುರ ಉಕ್ಕು ಕಾರ್ಖಾ ನೆಯ ಮೇಲ್ವಿಚಾರಕರನ್ನು ಕೆಲಸದಿಂದ ವಜಾಮಾಡಲಾಗಿದೆ.

Help The Gorakshana



Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳ ಹೆಚ್ಚಳಕ್ಕಾಗಿ ನಡೆಯೋ
ಗೋರಕ್ಷಣಕ್ಕೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Quality Printing — Neat Binding

Lakshminarasimha Press

Sivarampet, Mysore

ಪುರಂದರ್ ಅಮೋಘ 5 ನೇ ವಾರ
ಶಿ ನಿ ಅಮೋಘ ಪ್ರಾರಂಭ

.... ತುಂಬಿದ ಚಿತ್ರಮಂದಿರಕ್ಕೆ ಪ್ರದರ್ಶಿತವಾಗುತ್ತಿದೆ ....

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 2ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಭಲೇ ಕಿಲಾಡಿ

ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್

ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ

ದಿಗ್ದರ್ಶನ : ಎ. ನಾಗರಾಜ್

ದಿನ 3 ಆಟಗಳು

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಸಾವತಿಮಾಡುವ ಅಡ್ರೆಸ್

1. ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ
2. ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

SHAKTI SUDHA

A Superb Tonic

Edited Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore 4